# ಕರ್ನಾಟಕ ಸರ್ಕಾರ

## ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ:ಪಪೂಶಿಇ:ಶೈಶಾ:ಪ.ವ.ಕ:2020-21 ದಿನಾಂಕ: .02.2021

**ಅತೀ ತುರ್ತು**

**ಸುತ್ತೋಲೆ**

ವಿಷಯ:- ಪದವಿ ಪೂರ್ವ ಶಿಕ್ಷಣದ ಪಠ್ಯವಸ್ತುವಿನಲ್ಲಿ ಶೇ 30% ರಷ್ಟು ಕಡಿತವಾಗಿರುವ ವಿವರವನ್ನು ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ನೀಡುವ ಬಗ್ಗೆ.

ಉಲ್ಲೇಖ:- ಈ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ:- 21.10.2020

-------

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿಷಯ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಪಠ್ಯಪುಸ್ತಕ ರಚನಾ ಸಮತಿರೊಂದಿಗೆ ಚರ್ಚಿಸಿ, ಶೇ 30% ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯವಸ್ತುವನ್ನು ಕಡತಗೊಳಿಸಲಾಗಿದೆ. ಪರಿಷ್ಕೃತ ಪಠ್ಯವಸ್ತುವನ್ನು ಇಲಾಖೆಯ ಅಂತರ್‌ಜಾಲದಲ್ಲಿ ಉಲ್ಲೇಖ ಪತ್ರದನ್ವಯ ದಿನಾಂಕ: 21.10.2020 ರಂದು ರಾಜ್ಯದ ಎಲ್ಲಾ ಪ್ರಾಂಶುಪಾಲರು/ಉಪನ್ಯಾಸಕರು/ವಿದ್ಯಾರ್ಥಿಗಳಿಗ ಲಭ್ಯವಾಗುವಂತೆ ಅಳವಡಿಸಲಾಗಿದೆ. ಅದಾಗ್ಯೂ ಕೆಲವು ಕಾಲೇಜುಗಳಿಂದ ಈ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ಮಾನ್ಯ ಶಿಕ್ಷಣ ಸಚಿವರಿಗೆ ದೂರುಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ, ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾರಿಗೆ ತುರ್ತಾಗಿ ಶೇ 30% ಕಡಿತಗೊಂಡಿರುವ ಪಠ್ಯವಸ್ತುವಿನ ಪ್ರತಿಯನ್ನು (ಸಾಫ್ಟ್ ಅಥವಾ ಮುದ್ರಿತ ಪ್ರತಿ) ತಲುಪಿಸುವ ಸಂಬಂಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು ಹಾಗೂ ಈ ಸಂಬಂಧ ಯಾವುದೇ ದೂರುಗಳಿಗೆ ಆಸ್ಪದವಿಲ್ಲದಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ
ಪದವಿ ಪೂರ್ವ ಶಿಕ್ಷಣ ಇಲಾಖೆ- ಅಗತ್ಯ ಕ್ರಮಕ್ಕಾಗಿ